# 5ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2021

## ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ - 2021



## ಶ್ರೀಯುತ ಡಾ. ಸಿ.ಆರ್. ಗೋಪಾಲ್ ರವರ ಪ್ರಶಸ್ತಿ ಪತ್ರ

**ಶ್ರೀಯುತ ಡಾ. ಸಿ.ಆರ್. ಗೋಪಾಲ್**ರವರು ಕರ್ನಾಟಕದಲ್ಲಿ ಸಮಾಜಕಾರ್ಯ, ಮಾನವ ಸಂಪನ್ಮೂಲ ಹಾಗೂ ಸಂಸ್ಕೃತಿ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿ ಸುಪ್ರಸಿದ್ಧರಾಗಿದ್ದಾರೆ. ಡಾ. ಗೋಪಾಲ್‌ರವರು ಮೂಲತಃ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ಒಡೆಯರಹಳ್ಳಿಯಲ್ಲಿ, ಸ್ವಾತಂತ್ರ್ಯ ಹೋರಾಟಗಾರ, ಅಪ್ಪಟ ಗಾಂಧೀವಾದಿ ಹಾಗೂ ಆದರ್ಶ ರೈತ ಎನ್ನಿಸಿಕೊಂಡ ದಿ॥ ಸಿ.ಕೆ. ರಾಮಾಚಾರ್ ಮತ್ತು ಶ್ರೀಮತಿ ಇಂದಿರಾಬಾಯಿ ದಂಪತಿಗೆ ಪ್ರಥಮ ಪುತ್ರರಾಗಿ 1953 ರಲ್ಲಿ ಜನಿಸಿದ್ದಾರೆ. ಪ್ರಾರಂಭಿಕ ವಿದ್ಯಾಭ್ಯಾಸವನ್ನು ತಮ್ಮ ಗ್ರಾಮದಲ್ಲಿ ಮುಗಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದಿಂದ ಬಾಹ್ಯ ವ್ಯವಸ್ಥೆಯ ವಿದ್ಯಾರ್ಥಿಯಾಗಿ ಸ್ನಾತಕ ಮತ್ತು ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ. ದಕ್ಷಿಣ ಭಾರತದ ಪ್ರಖ್ಯಾತ ಸಮಾಜಕಾರ್ಯ ಶಾಲೆ, ರೋಶನಿ ನಿಲಯ, ಮಂಗಳೂರಿನಲ್ಲಿ (ಮೈಸೂರು ವಿಶ್ವವಿದ್ಯಾಲಯ) ಸಮಾಜಕಾರ್ಯ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ಆನಂತರ ಸಂತ ಝೇವಿಯರ್ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ದಕ್ಷಿಣ ಪ್ರಾಚ್ಯ ಏಷ್ಯಾ ಗ್ರಾಮಾಂತರ ಸಾಮಾಜಿಕ ನಾಯಕತ್ವ ಸಂಸ್ಥೆ (SEARSOLIN), ಕಗಯಾನ್ ಡಿ ಅರೋ ಪಟ್ಟಣ, ಫಿಲಿಪೈನ್ಸ್‌ನಲ್ಲಿ ಗ್ರಾಮಾಂತರ ಸಾಮಾಜಿಕ ನಾಯಕತ್ವ ಡಿಪ್ಲೊಮಾ ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ವ್ಯವಹಾರ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಪದವಿಗಳನ್ನು ಸಂಪಾದಿಸಿದ್ದಾರೆ. ಭಾರತದ ಪ್ರಸಿದ್ಧ ಸಮಾಜಕಾರ್ಯ ಪ್ರಾಧ್ಯಾಪಕರಾದ ಪ್ರೊ. ಎಚ್.ಎಂ. ಮರುಳಸಿದ್ಧಯ್ಯನವರ ಮಾರ್ಗದರ್ಶನದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ.

ಮದ್ರಾಸ್ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಮದ್ರಾಸ್ ಸಮಾಜಕಾರ್ಯ ಶಾಲೆಯಲ್ಲಿ ಒಂದು ಶೈಕ್ಷಣಿಕ ವರ್ಷ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಶ್ರೀಯುತರು, ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಲಿ. ಸಂಸ್ಥೆಯಲ್ಲಿ 33 ವರ್ಷಗಳ ದೀರ್ಘ ಸೇವೆಯ ನಂತರ 2012 ರಲ್ಲಿ ನಿವೃತ್ತಿ ಹೊಂದಿದ್ದಾರೆ. ಸಮಾಜಕಾರ್ಯ, ಮಾನವ ಸಂಪನ್ಮೂಲ, ಗ್ರಾಮೀಣಾಭಿವೃದ್ಧಿ, ಸಹಕಾರ, ಸಾರ್ವಜನಿಕ ಸಂಪರ್ಕ, ಸಾಮಾನ್ಯ ಆಡಳಿತ, ಮೂಲ ಶಿಕ್ಷಣ, ವಯಸ್ಕರ ಶಿಕ್ಷಣ, ಕುಶಲಕಲೆ ಮುಂತಾದ ಕ್ಷೇತ್ರಗಳಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಸಾಕ್ಷರತಾ ಆಂದೋಲನದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ನಿರೀಕ್ಷಿತ ಯಶಸ್ಸನ್ನು ಸಾಧಿಸಿದ್ದಾರೆ. ಸ್ಮಯೋರ್ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾಗಿ, ತಮ್ಮ ವಹಿವಾಟಿನ ಬಹುಪಾಲು ಭಾಗವನ್ನು ಕನ್ನಡೀಕರಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

ಲಂಬಾಣಿ ಜನಾಂಗದ ಬದಲಾವಣೆ ಮತ್ತು ಅಭ್ಯುದಯ, ಉತ್ಕ್ರಾಂತಿಯತ್ತ ಲಂಬಾಣಿಗಳು, ಸಮಾಜಕಾರ್ಯ ಸಿದ್ಧಾಂತ–ಶರಣರ ಮತ್ತು ದಾಸರ ಜೀವನ ಶೈಲಿಯ ತೌಲನಿಕ ಅಧ್ಯಯನ, ಸನ್ಮಾರ್ಗ, ಭಾಷಣಕಲೆ, ವೃಂದಗತ ಸಮಾಜಕಾರ್ಯ, ಸಮುದಾಯ ಸಂಘಟನೆ, ವಯಸ್ಕರ ಶಿಕ್ಷಣ ಹಾಗೂ ಸಾಮಾಜಿಕ ಕ್ರಿಯಾಚರಣೆ ಮುಂತಾದ ವಿಷಯಗಳ ಬಗ್ಗೆ ಹನ್ನೊಂದು ಬೃಹತ್ತಾದ ಪುಸ್ತಕಗಳನ್ನು ರಚಿಸಿದ್ದಾರೆ. ಅಭ್ಯುದಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಅನೇಕ ಲೇಖನಗಳನ್ನು ಬರೆದಿದ್ದಾರೆ, ನೂರಾರು ಉಪನ್ಯಾಸಗಳನ್ನು ಮಾಡಿದ್ದಾರೆ. ನಿರುತ ಪ್ರಕಾಶನದಿಂದ ಪ್ರಕಟಗೊಳ್ಳುತ್ತಿರುವ 'ಸಮಾಜಕಾರ್ಯದ ಹೆಜ್ಜೆಗಳು' ತ್ರೈಮಾಸಿಕದ ಸಂಪಾದಕ ಮಂಡಳಿಯಲ್ಲಿ ಎಂಟು ವರ್ಷಗಳ ಸೇವೆ ಸಲ್ಲಿಸಿದ್ದಾರೆ.

ಡಾ. ಗೋಪಾಲ್‌ರವರು ಸುಸಂಸ್ಕೃತರು ಹಾಗೂ ತುಂಬಾ ಸರಳಜೀವಿಗಳು. ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡಿರುವವರು ಮತ್ತು ಬಹುಮುಖ ಪ್ರತಿಭೆಯುಳ್ಳವರು. ಅವರ ಮಾತು–ಭಾಷೆ ವಿಶಿಷ್ಟ ಹಾಗೂ ಅನುಭವಪೂರ್ಣ. ಸಮಾಜಕಾರ್ಯದಲ್ಲಿ ಅಪಾರ ವಿದ್ವತ್ತನ್ನು ಪಡೆದಂತಹವರು. ನಿರಾತಂಕ ಮತ್ತು ನಿರುತ ಪಬ್ಲಿಕೇಷನ್ಸ್ ಸಂಸ್ಥೆಗೆ ಪ್ರಾರಂಭದ ದಿನಗಳಿಂದಲೂ ಮಾರ್ಗದರ್ಶನ ಮಾಡುತ್ತಿರುವ ನಿಸ್ವಾರ್ಥ ಕಾಯಕಯೋಗಿಗಳು.

ಶ್ರೀಯುತರ ಅಮೋಘ ವ್ಯಕ್ತಿತ್ವ ಮತ್ತು ಸ್ವಾರ್ಥರಹಿತ ಸೇವೆಗಾಗಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ. ಜರ್ಮನಿಯ ಮಿಸರಿಯೋರ್ ಸ್ಕಾಲರ್‌ಷಿಪ್ ಅವಾರ್ಡ್, ಪ್ರಥಮ ರಾಜ್ಯಮಟ್ಟದ ಮಾನವ ಸಂಪನ್ಮೂಲ ಸಮ್ಮೇಳನದ ಸಂದರ್ಭದಲ್ಲಿನ ಲೇಖನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಯುವಜನ ಇಲಾಖೆಯ ರಾಜ್ಯಮಟ್ಟದ, ವಿಭಾಗಮಟ್ಟದ, ಜಿಲ್ಲಾಮಟ್ಟದ, ತಾಲ್ಲೂಕು ಮಟ್ಟದ ಭಾಷಣ ಸ್ಪರ್ಧೆಗಳಲ್ಲಿ ಬಹುಮಾನಗಳು ಮುಂತಾದ ಹತ್ತಾರು ಬಹುಮಾನಗಳು ಇವರಿಗೆ ಸಂದಿವೆ. ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು ಹಾಗೂ ಅನೇಕ ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ, ಪುರಸ್ಕಾರಗಳನ್ನು ಪಡೆದವರಾಗಿದ್ದಾರೆ.

ಡಾ. ಸಿ.ಆರ್. ಗೋಪಾಲ್‌ರವರು ಸಮಾಜಕಾರ್ಯ, ಸಂಸ್ಕೃತಿ ಹಾಗೂ ಮಾನವ ಸಂಪನ್ಮೂಲ ಕ್ಷೇತ್ರಗಳಿಗೆ ಸಲ್ಲಿಸಿರುವ ಗಣನೀಯ ಸೇವೆಯನ್ನು ಗುರುತಿಸಿ ಐದನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2021 ರ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ **"ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ – 2021"** ನೀಡುತ್ತಾ ಸನ್ಮಾನಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಭಗವಂತ ಇವರಿಗೆ ಮತ್ತು ಇವರ ಕುಟುಂಬ ಸದಸ್ಯರಿಗೆ ಆರೋಗ್ಯ ಸುಖ–ಶಾಂತಿ ನೆಮ್ಮದಿ ಸಮೃದ್ಧಿಯನ್ನು ದಯಪಾಲಿಸಲೆಂದು ಎಲ್ಲ ಮಾನವ ಸಂಪನ್ಮೂಲ ವೃತ್ತಿನಿರತರ ಪರವಾಗಿ ಆಶಿಸುತ್ತೇವೆ.

**ಬಿ.ಸಿ. ಪ್ರಭಾಕರ್**
ಅಧ್ಯಕ್ಷರು–ಕರ್ನಾಟಕ ಮಾಲೀಕರ ಸಂಘ.
ವಕೀಲರು–ಬಿಸಿಪಿ ಅಸೋಸಿಯೇಟ್ಸ್
ಮತ್ತು ಸಮ್ಮೇಳನದ ಮಾರ್ಗದರ್ಶಕರು

**ರಮೇಶ ಎಂ.ಎಚ್.**
ಕಾರ್ಯದರ್ಶಿ,
ನಿರಾತಂಕ ಟ್ರಸ್ಟ್

ಕನ್ನಡ ಬಳಸಿ, ಕಲಿಸಿ ಮತ್ತು ಬೆಳೆಸಿ

www.hrkancon.com, www.niratanka.org